# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 644 (784) |
| ಸದಸ್ಯರ ಹೆಸರು | ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 26-12-2022 |
| ಉತ್ತರಿಸಬೇಕಾದ ಸಚಿವರು | ಉನ್ನತ ಶಿಕ್ಷಣ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ಉನ್ನತ ಶಿಕ್ಷಣ ಇಲಾಖೆಯಡಿ ಬರುವ ಪದವಿ ಕಾಲೇಜುಗಳು ಹಾಗೂ ತಾಂತ್ರಿಕ ಶಿಕ್ಷಣ ಇಲಾಖೆಯ ಇಂಜಿನಿಯರಿಂಗ್ ಮತ್ತು ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ದೀರ್ಘಕಾಲದಿಂದ ಖಾಲಿ ಇರುವ ಪ್ರಾಂಶುಪಾಲರ ಹುದ್ದೆಗಳ ಸಂಖ್ಯೆ ಎಷ್ಟು; (ಪ್ರತ್ಯೇಕವಾಗಿ ವಿವರ ನೀಡುವುದು) | ಉನ್ನತ ಶಿಕ್ಷಣ ಇಲಾಖೆಯಡಿಯ ಕಾಲೇಜು ಶಿಕ್ಷಣ ಇಲಾಖೆ ವ್ಯಾಪ್ತಿಯಡಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇರುವ ಪ್ರಾಂಶುಪಾಲರ ಹುದ್ದೆಗಳ ಸಂಖ್ಯೆ: 412.<br><br>ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿ ಬರುವ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರಾಂಶುಪಾಲರ ಖಾಲಿ ಇರುವ ಹುದ್ದೆಗಳ ಸಂಖ್ಯೆ:07.<br><br>ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿನ ಪ್ರಾಂಶುಪಾಲರ ಖಾಲಿ ಇರುವ ಹುದ್ದೆಗಳ ಸಂಖ್ಯೆ:67. |
| ಆ) | ಸದರಿ ಹುದ್ದೆಗಳನ್ನು ದೀರ್ಘಕಾಲದಿಂದ ನೇಮಕಾತಿ ಮಾಡಿಕೊಳ್ಳದಿರುವುದರಿಂದ ಆಡಳಿತ ಮತ್ತು ಗುಣಾತ್ಮಕ ಶಿಕ್ಷಣಕ್ಕೆ ಅಡಚಣೆ ಉಂಟಾಗುತ್ತಿಲ್ಲವೇ; | • ಸರ್ಕಾರದ ಆದೇಶ ಸಂಖ್ಯೆ:ಇಡಿ 91 ಡಿಸಿಇ 2004, ದಿನಾಂಕ:25.09.2009 ರಲ್ಲಿ ಜಾರಿಗೊಳಿಸಲಾಗಿರುವ ಪರಿಷ್ಕೃತ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಪ್ರಾಂಶುಪಾಲರ ಹುದ್ದೆಗಳನ್ನು ಯು.ಜಿ.ಸಿ. ನಿಯಮಗಳನ್ವಯ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಆದೇಶಿಸಲಾಗಿದೆ.<br>• ಸರ್ಕಾರದ ಆದೇಶ ಸಂಖ್ಯೆ:ಇಡಿ 121 ಡಿಸಿಇ 2018, ದಿನಾಂಕ:11.06.2019 ರಲ್ಲಿ ಒಟ್ಟು 310 ಪ್ರಾಂಶುಪಾಲರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅನುಮತಿ ನೀಡಲಾಗಿರುತ್ತದೆ.<br>• ಅದರಂತೆ, 310 ಪ್ರಾಂಶುಪಾಲರ ಹುದ್ದೆಗಳನ್ನು ಭರ್ತಿ ಮಾಡಲು ವಿಶೇಷ ನಿಯಮಾವಳಿಗಳನ್ನು ರೂಪಿಸಿ, ಸರ್ಕಾರದ ಆದೇಶ ಸಂಖ್ಯೆ:ಇಡಿ 121 ಡಿಸಿಇ 2018, ದಿನಾಂಕ:09.09.2020 ರಲ್ಲಿ ಪ್ರಕಟಿಸಲಾಗಿದೆ.<br>• ಸದರಿ ವಿಶೇಷ ನಿಯಮಗಳನ್ವಯ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಿ, 310 ಪ್ರಾಂಶುಪಾಲರ ಹುದ್ದೆಗಳಿಗೆ ನಿಯಮಾನುಸಾರ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ, ಅಂತಿಮ ಆಯ್ಕೆ ಪಟ್ಟಿಯನ್ನು ಸಲ್ಲಿಸಲು ಸರ್ಕಾರದ ಆದೇಶ ಸಂಖ್ಯೆ:ಇಡಿ 121 ಡಿಸಿಇ 2018, ದಿನಾಂಕ:21.03.2022 ರಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ವಹಿಸಲಾಗಿದೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ದಿನಾಂಕ:13.12.2022ರಂದು ಪ್ರಾಂಶುಪಾಲರ ನೇರ ನೇಮಕಾತಿಗೆ ಅರ್ಜಿ ಆಹ್ವಾನಿಸಿರುತ್ತದೆ<br>• ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಿ, ನಿಯಮಾನುಸಾರ ಆಯ್ಕೆಗೊಂಡ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಸರ್ಕಾರ/ಇಲಾಖೆಗೆ ಸಲ್ಲಿಸಿದ ನಂತರ |

| | | |
|---|---|---|
| | | ನಿಯಮಾನುಸಾರ ಪ್ರಾಂಶುಪಾಲರ ಹುದ್ದೆಗಳ ಭರ್ತಿಗೆ ಕ್ರಮವಹಿಸಲಾಗುವುದು.<br>• ಮುಂದುವರೆದು, ಕಾಲೇಜಿನ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ಜೇಷ್ಠತೆಯಲ್ಲಿ ಹಿರಿಯರಾದ ಸಹ/ಸಹಾಯಕ ಪ್ರಾಧ್ಯಾಪಕರಿಗೆ ಪ್ರಾಂಶುಪಾಲರ ಕಾರ್ಯವನ್ನು ನಿರ್ವಹಿಸಲು ಸೂಚಿಸಲಾಗಿದೆ.<br><br>ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಮತ್ತು ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ಖಾಲಿಯಿರುವ ಪ್ರಾಂಶುಪಾಲರ ಹುದ್ದೆಯನ್ನು ಆಯಾ ಸಂಸ್ಥೆಗಳ ಹಿರಿಯ ಬೋಧಕ ವರ್ಗದವರಿಗೆ ತಾತ್ಕಾಲಿಕ ಪ್ರಾಂಶುಪಾಲರ ಹುದ್ದೆಯ ಕಾರ್ಯಾಭಾರವನ್ನು ನಿರ್ವಹಿಸಲು ಅನುಮತಿ ನೀಡಲಾಗಿದ್ದು, ಈ ಹಿನ್ನಲೆಯಲ್ಲಿ ಸದರಿ ಸಂಸ್ಥೆಗಳ ಆಡಳಿತ ಮತ್ತು ಶೈಕ್ಷಣಿಕ ಚಟುವಟಿಕೆಗಳಿಗೆ ಯಾವುದೇ ತೊಂದರೆ ಉಂಟಾಗಿರುವುದಿಲ್ಲ. |
| ಇ) | ಸದರಿ ಹುದ್ದೆಗಳನ್ನು ನೇಮಕ ಮಾಡಲು ಯು.ಜಿ.ಸಿ. ನಿಯಮಾವಳಿಯಂತೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸುವಲ್ಲಿ ಆಗಿರುವ ವಿಳಂಬಕ್ಕೆ ಕಾರಣಗಳೇನು; | ಪ್ರಾಂಶುಪಾಲರ ಹುದ್ದೆಗಳನ್ನು ಯು.ಜಿ.ಸಿ. ನಿಯಮಾವಳಿಯಂತೆ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ವೃಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸಿ, ಸರ್ಕಾರದ ಆದೇಶ ಸಂಖ್ಯೆ:ಇಡಿ 91 ಡಿಸಿಇ 2004, ದಿನಾಂಕ:25.09.2009 ರಲ್ಲಿ ಪ್ರಕಟಿಸಲಾಗಿದೆ.<br><br>ತಾಂತ್ರಿಕ ಶಿಕ್ಷಣ ಇಲಾಖೆಯ ಸರ್ಕಾರಿ ಇಂಜಿನಿಯರಿಂಗ್ ಮತ್ತು ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿನ ಪ್ರಾಂಶುಪಾಲರ ಹುದ್ದೆಗಳನ್ನು ಎಐಸಿಟಿಇ ನಿಯಮಗಳನ್ವಯ ಭರ್ತಿಮಾಡಬೇಕಾಗಿದ್ದು, ಪ್ರಸ್ತುತ, ಮಾರ್ಚ್ 2019 ರಲ್ಲಿ 07 ನೇ ಪರಿಷ್ಕೃತ ಎಐಸಿಟಿಇ ನಿಯಮಗಳನ್ನು ಜಾರಿಗೆ ಬಂದಿದ್ದು, ಎಐಸಿಟಿಇ 7ನೇ ಪರಿಷ್ಕೃತ ವೇತನ ಶ್ರೇಣಿಯನ್ವಯ ಮತ್ತು ಎಐಸಿಟಿಇಯ ಇತರ ಮಾರ್ಗಸೂಚಿಗಳನ್ನು ಹಾಗೂ ರಾಜ್ಯ ಸರ್ಕಾರದ ನಿಯಮ/ಆದೇಶ/ಮಾರ್ಗಸೂಚಿಗಳನ್ನು ಅಳವಡಿಸಿಕೊಂಡು, ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸಮಗ್ರವಾಗಿ ಪರಿಷ್ಕರಿಸಿ, ನೂತನ ಕರಡು ವೃಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸಿ, ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ರವರು ದಿನಾಂಕ:13.12.2022ರಂದು ಸರ್ಕಾರಕ್ಕೆ ಸಲ್ಲಿಸಿದ್ದು, ಸದರಿ ಪ್ರಸ್ತಾವನೆಗೆ ವೃಂದ ಪರಿಶೀಲನಾ ಸಮಿತಿ ಸದಸ್ಯ ಇಲಾಖೆಗಳಾದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಸಂಸದೀಯ ವ್ಯವಹಾರಗಳು ಮತ್ತು ಶಾಸನಾ ರಚನಾ ಇಲಾಖೆ ಮತ್ತು ಆರ್ಥಿಕ ಇಲಾಖೆಯ ಅಭಿಪ್ರಾಯ ಪಡೆಯಲು ಕ್ರಮವಹಿಸಲಾಗುತ್ತಿದೆ. |
| ಈ) | ಪ್ರಾಂಶುಪಾಲರ ಹುದ್ದೆಯ ನೇಮಕಾತಿಯ ಮಾನದಂಡಗಳೇನು; (ಪೂರ್ಣ ವಿವರಗಳೊಡನೆ ಮಾಹಿತಿ ನೀಡುವುದು) | ಪ್ರಾಂಶುಪಾಲರ ಹುದ್ದೆಯ ನೇಮಕಾತಿಯ ಮಾನದಂಡಗಳ ಕುರಿತು ಸರ್ಕಾರದ ಆದೇಶ ಸಂಖ್ಯೆ:ಇಡಿ 121 ಡಿಸಿಇ 2018, ದಿನಾಂಕ:09.09.2020 ರಲ್ಲಿ ಜಾರಿಗೊಳಿಸಿರುವ "ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಕಾಲೇಜು ಶಿಕ್ಷಣ ಇಲಾಖೆ) (ಪ್ರಾಂಶುಪಾಲರು (ಯು.ಜಿ) ಹುದ್ದೆಗಳ ನೇಮಕಾತಿ) (ವಿಶೇಷ) ನಿಯಮಗಳು, 2020" ಮತ್ತು 2022 ರ ತಿದ್ದುಪಡಿ ನಿಯಮಗಳಲ್ಲಿ ಪ್ರಾಂಶುಪಾಲರ ನೇಮಕಾತಿ ಮಾನದಂಡಗಳನ್ನು ನಿಗದಿಪಡಿಸಲಾಗಿರುತ್ತದೆ. ಪ್ರತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ. |

| | | |
|---|---|---|
| | | ಪ್ರಸ್ತುತ, ಮಾರ್ಚ್ 2019 ರಂದು 07 ನೇ ಪರಿಷ್ಕೃತ ಎಐಸಿಟಿಇ ನಿಯಮಗಳು ಜಾರಿಗೆ ಬಂದಿದ್ದು, ಸದರಿ ನಿಯಮಗಳನ್ನು ತಾಂತ್ರಿಕ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅಳವಡಿಸಿಕೊಳ್ಳುವ ಪ್ರಕ್ರಿಯೆಯು ಜಾರಿಯಲ್ಲಿರುತ್ತದೆ. |
| ಉ) | ಯಾವ ಕಾಲಮಿತಿಯಲ್ಲಿ ನೇಮಕಾತಿ ಮಾಡಲಾಗುವುದು? | ಉಪ ಪ್ರಶ್ನೆ (ಆ) ರಲ್ಲಿ ವಿವರಿಸಿದೆ.<br><br>ಎಐಸಿಟಿಇ ಮಾರ್ಗಸೂಚಿಗಳನ್ವಯ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಮತ್ತು ಸರ್ಕಾರಿ ಪಾಲಿಟೆಕ್ನಿಕ್ ಗಳಲ್ಲಿನ ಪ್ರಾಂಶುಪಾಲರ ಹುದ್ದೆಯನ್ನು ಭರ್ತಿ ಮಾಡಬೇಕಾಗಿದ್ದು, ಪ್ರಸ್ತುತ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳನ್ನು ತಿದ್ದುಪಡಿ ಮಾಡಲು ಕ್ರಮವಹಿಸಿದ್ದು, ವೃಂದ ಮತ್ತು ನೇಮಕಾತಿ ನಿಯಮಗಳು ತಿದ್ದುಪಡಿ ಆದ ನಂತರದಲ್ಲಿ ನಿಯಮಾನುಸಾರ ಭರ್ತಿ ಮಾಡಲು ಕ್ರಮವಹಿಸಲಾಗುವುದು. |

ಇಡಿ 328 ಡಿಸಿಇ 2022

**(ಡಾ: ಅಶ್ವಥ್ ನಾರಾಯಣ ಸಿ.ಎನ್.)**
ಉನ್ನತ ಶಿಕ್ಷಣ, ಐ.ಟಿ.-ಬಿ.ಟಿ. ವಿಜ್ಞಾನ ಮತ್ತು
ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ. ಇಡಿ 121 ಡಿಸಿಇ 2018

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:09.09.2020.

## ಅಧಿಸೂಚನೆ

ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮ, 1978ರ (1990 ರ ಕರ್ನಾಟಕ ಅಧಿನಿಯಮ ಸಂಖ್ಯೆ 14) ರ 3ನೇ ಪ್ರಕರಣದ (2)ನೇ ಉಪಪ್ರಕರಣದ (ಎ) ಖಂಡದ ಮೂಲಕ ಅಗತ್ಯಪಡಿಸಲಾದಂತೆ, ಕರ್ನಾಟಕ ಶಿಕ್ಷಣ ಇಲಾಖಾ ಸೇವೆಗಳ (ಕಾಲೇಜು ಶಿಕ್ಷಣ ಇಲಾಖೆ) (ಪ್ರಾಂಶುಪಾಲರ ಹುದ್ದೆಗಳ ನೇಮಕಾತಿ (ಸ್ನಾತಕ ಶಿಕ್ಷಣ)) (ವಿಶೇಷ) ನಿಯಮಗಳು, 2020 ರ ಕರಡನ್ನು ಇದರಿಂದ ಬಾಧಿತರಾಗಬಹುದಾದ ವ್ಯಕ್ತಿಗಳು, ತಮ್ಮ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಸಲ್ಲಿಸುವಂತೆ ಕೋರಿ, ಕರ್ನಾಟಕ ವಿಶೇಷ ರಾಜ್ಯಪತ್ರಿಕೆ ದಿನಾಂಕ: 11.02.2020 ರ ಭಾಗ-IV ಎ ಸಂಖ್ಯೆ 46 ರಲ್ಲಿ ಅಧಿಸೂಚನೆ ಸಂಖ್ಯೆ. ಇಡಿ 121 ಡಿಸಿಇ 2018, ದಿನಾಂಕ: 10.02.2020 ರಲ್ಲಿ ಪ್ರಕಟಿಸಿದ್ದರಿಂದ;

ಸದರಿ ರಾಜ್ಯಪತ್ರಿಕೆಯು 11.02.2020 ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿದ್ದರಿಂದ;

ಮತ್ತು ನಿಗದಿಪಡಿಸಿದ ಅವಧಿಯೊಳಗೆ ಸ್ವೀಕರಿಸಿದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಗಣಿಸಿರುವುದರಿಂದ;

ಆದ್ದರಿಂದ ಈಗ, ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮ, 1978ರ (1990 ರ ಕರ್ನಾಟಕ ಅಧಿನಿಯಮ ಸಂಖ್ಯೆ 14) 8ನೇ ಪ್ರಕರಣದ ಮೂಲಕ ಓದಿಕೊಂಡ 3ನೇ ಪ್ರಕರಣದ (1)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಮುಂದಿನ ನಿಯಮಗಳನ್ನು ರಚಿಸುತ್ತದೆ, ಎಂದರೆ:-

### *ನಿಯಮಗಳು*

***1. ಶೀರ್ಷಿಕೆ, ಪ್ರಾರಂಭ ಮತ್ತು ಅನ್ವಯ.***- (1) ಈ ನಿಯಮಗಳನ್ನು ಕರ್ನಾಟಕ ಶಿಕ್ಷಣ ಇಲಾಖಾ ಸೇವೆಗಳ (ಕಾಲೇಜು ಶಿಕ್ಷಣ ಇಲಾಖೆ) (ಪ್ರಾಂಶುಪಾಲರ ಹುದ್ದೆಗಳ ನೇಮಕಾತಿ (ಸ್ನಾತಕ ಶಿಕ್ಷಣ)) (ವಿಶೇಷ) ನಿಯಮಗಳು, 2020 ಎಂದು ಕರೆಯತಕ್ಕದ್ದು.

(2) ಇವು, ಸರ್ಕಾರಿ ರಾಜ್ಯಪತ್ರದಲ್ಲಿ ಅವು ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

(3) ಕರ್ನಾಟಕ ಶಿಕ್ಷಣ ಇಲಾಖಾ ಸೇವಾ (ಕಾಲೇಜು ಶಿಕ್ಷಣ ಇಲಾಖೆ) (ನೇಮಕಾತಿ) ನಿಯಮಗಳು, 2008, ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977 ಅಥವಾ ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮ, 1978 (1990 ರ ಕರ್ನಾಟಕ ಅಧಿನಿಯಮ ಸಂಖ್ಯೆ 14) ರ ಮೇರೆಗೆ ರಚಿಸಿರುವ ಅಥವಾ ರಚಿಸಲಾಗಿದೆ ಎಂದು ಭಾವಿಸಿರುವ, ಕಾಲೇಜು ಶಿಕ್ಷಣ ಇಲಾಖೆಯಲ್ಲಿನ ಪ್ರಾಂಶುಪಾಲರ ಹುದ್ದೆಯ (ಸ್ನಾತಕ ಶಿಕ್ಷಣ) ನೇಮಕಾತಿಯನ್ನು ನಿರ್ವಹಿಸುವ ಯಾವುದೇ ಇತರ ನಿಯಮಗಳಲ್ಲಿ ಏನೇ ಇದ್ದರೂ, ಈ ನಿಯಮಗಳ ಉಪಬಂಧಗಳು, ಈ ನಿಯಮಗಳು ಜಾರಿಗೆ ಬಂದ ದಿನಾಂಕದಂದು ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಚಾಲ್ತಿಯಲ್ಲಿದ್ದ 45 ಹೈದರಾಬಾದ್-ಕರ್ನಾಟಕ ಮತ್ತು 265 ಉಳಿಕೆ ಮೂಲ ವೃಂದದ ನೇರ ನೇಮಕಾತಿ ಖಾಲಿ ಹುದ್ದೆಗಳಿಗೆ ಅನ್ವಯವಾಗತಕ್ಕದ್ದು:

ಪರಂತು, ಈ ನಿಯಮಗಳು ಒಂದಕ್ಕಿಂತ ಹೆಚ್ಚಿನ ನೇಮಕಾತಿಗೆ ಅನ್ವಯವಾಗತಕ್ಕದ್ದಲ್ಲ.

***2. ಪರಿಭಾಷೆಗಳು.***–(1) ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ನೇಮಕಾತಿ ಪ್ರಾಧಿಕಾರ" ಎಂದರೆ ಕರ್ನಾಟಕ ಸರ್ಕಾರ;

(ಬಿ) "ಅನುಬಂಧ" ಎಂದರೆ ಈ ನಿಯಮಗಳಿಗೆ ಲಗತ್ತಾಗಿರುವ ಅನುಬಂಧ;

(ಸಿ) "ಪರೀಕ್ಷಾ ಪ್ರಾಧಿಕಾರ" ಎಂದರೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ;

(ಡಿ) "ಸರ್ಕಾರಿ ಪ್ರಥಮ ದರ್ಜೆ ಕಾಲೇಜು (ಸ್ನಾತಕ ಶಿಕ್ಷಣ)" ಎಂದರೆ ರಾಜ್ಯ ಸರ್ಕಾರ ಸ್ಥಾಪಿಸಿರುವ ಮತ್ತು ನಿರ್ವಹಿಸುತ್ತಿರುವ ಪದವಿ ಕಾಲೇಜು;

(ಇ) "ಪ್ರಾಂಶುಪಾಲರು (ಸ್ನಾತಕ ಶಿಕ್ಷಣ)" ಎಂದರೆ ಕರ್ನಾಟಕ ರಾಜ್ಯದಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಂದರ್ಭಾನುಸಾರವಾಗಿ ಪ್ರಾಂಶುಪಾಲರ (ಸ್ನಾತಕ ಶಿಕ್ಷಣ) ಅಥವಾ ಸರ್ಕಾರಿ ಕಾನೂನು ಕಾಲೇಜಿನ ಪ್ರಾಂಶುಪಾಲರ (ಸ್ನಾತಕ ಶಿಕ್ಷಣ) ಹುದ್ದೆ;

(ಎಫ್) "ಆಯ್ಕೆ" ಎಂದರೆ ಆಯ್ಕೆ ಪ್ರಾಧಿಕಾರವು ಈ ನಿಯಮಗಳ ಉಪಬಂಧಗಳ ಅನುಸಾರವಾಗಿ ಮಾಡುವ ಆಯ್ಕೆ;

(ಜಿ) "ಆಯ್ಕೆ ಪ್ರಾಧಿಕಾರ" ಎಂದರೆ ಈ ನಿಯಮಗಳ 4ನೇ ನಿಯಮದ ಅಡಿಯಲ್ಲಿ ರಚಿಸಿರುವ ಆಯ್ಕೆ ಪ್ರಾಧಿಕಾರ:

(2) ಈ ನಿಯಮಗಳಲ್ಲಿ ಬಳಸಿರುವ ಆದರೆ, ಪರಿಭಾಷಿಸದಿರುವ ಪದಗಳು ಮತ್ತು ಪದಾವಳಿಗಳು, ಅವುಗಳಿಗೆ ಕರ್ನಾಟಕ ರಾಜ್ಯ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರಲ್ಲಿ ನೀಡಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು.

***3. ಅರ್ಹತೆ.***– (1) ಈ ಮುಂದೆ ಹೇಳಿರುವ ಅರ್ಹತೆಗಳನ್ನು ಹೊಂದಿಲ್ಲದ ಹೊರತು, ಯಾರೇ ವ್ಯಕ್ತಿ ಈ ನಿಯಮಗಳ ಮೇರೆಗೆ ಪ್ರಾಂಶುಪಾಲರು (ಸ್ನಾತಕ ಶಿಕ್ಷಣ) ಆಗಿ ನೇಮಕವಾಗಲು ಅರ್ಹನಾಗಿರತಕ್ಕದ್ದಲ್ಲ,–

(ಎ) ಕಾನೂನು ರೀತ್ಯಾ ಸ್ಥಾಪಿಸಿರುವ ವಿಶ್ವವಿದ್ಯಾಲಯದಿಂದ ಪಿಎಚ್.ಡಿ ವಿದ್ಯಾರ್ಹತೆಯನ್ನು ಪಡೆದಿರಬೇಕು ಮತ್ತು;

(ಬಿ) ಕರ್ನಾಟಕದ ವಿಶ್ವವಿದ್ಯಾಲಯಗಳಿಗೆ ಸಂಯೋಜನೆಗೊಂಡಿರುವ ಯಾವುದೇ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅಥವಾ ಖಾಸಗಿ ಪದವಿ ಕಾಲೇಜಿನಲ್ಲಿ ಬೋಧನೆ ಅಥವಾ ಸಂಶೋಧನೆ ಅಥವಾ ಆಡಳಿತದಲ್ಲಿ ಪೂರ್ಣಕಾಲಿಕ ಬೋಧಕ ಸಿಬ್ಬಂದಿಯಾಗಿ ಒಟ್ಟು ಹದಿನೈದು ವರ್ಷಗಳ ಸೇವಾನುಭವ ಹೊಂದಿರುವ ಪ್ರಾಧ್ಯಾಪಕ/ಸಹ ಪ್ರಾಧ್ಯಾಪಕರಾಗಿರಬೇಕು;

(ಸಿ) ಪ್ರೌಢ ಸಂಶೋಧನಾ ಪತ್ರಿಕೆಗಳು (ಪ್ರಿ ರಿವ್ಯೂಡ್) ಅಥವಾ ಯು.ಜಿ.ಸಿ ಪಟ್ಟಿಮಾಡಿರುವ ಪತ್ರಿಕೆಗಳಲ್ಲಿ ಕನಿಷ್ಠ 10 ಸಂಶೋಧನಾ ಲೇಖನಗಳನ್ನು ಪ್ರಕಟಿಸಿರಬೇಕು.;

(ಡಿ) ಈ ನಿಯಮಗಳ ಅನುಬಂಧ–ಬಿ ರಲ್ಲಿ ನಿಗದಿಪಡಿಸಿರುವಂತೆ, ವಿಶ್ವವಿದ್ಯಾಲಯಗಳಲ್ಲಿ ಮತ್ತು ಕಾಲೇಜುಗಳಲ್ಲಿ ಬೋಧಕರ ಮತ್ತು ಇತರ ಶೈಕ್ಷಣಿಕ ಸಿಬ್ಬಂದಿಯ ನೇಮಕಾತಿಗಾಗಿ ಕನಿಷ್ಠ ವಿದ್ಯಾರ್ಹತೆಗಳ ಮೇರೆಗೆ ಮತ್ತು ಉನ್ನತ ಶಿಕ್ಷಣದಲ್ಲಿ ಗುಣಮಟ್ಟಗಳ ನಿರ್ವಹಣೆಗೆ ಸಂಬಂಧಿಸಿದ ಕ್ರಮಗಳ ಕುರಿತ ವಿಶ್ವವಿದ್ಯಾಲಯ ಧನ ಸಹಾಯ ಆಯೋಗದ ವಿನಿಯಮಗಳು, 2018ರ ಅನುಬಂಧ–ಬಿ ರ ಕೋಷ್ಟಕ–2 ರಲ್ಲಿನ ಅನುಸಾರವಾಗಿ ಕನಿಷ್ಠ 110 ಸಂಶೋಧನಾ ಅಂಕಗಳನ್ನು ಹೊಂದಿರಬೇಕು;

(ಇ) ಭಾರತದ ನಾಗರೀಕರನಾಗಿರಬೇಕು,; ಮತ್ತು

(ಎಫ್) ಪರೀಕ್ಷಾ ಪ್ರಾಧಿಕಾರಕ್ಕೆ ಅರ್ಜಿಗಳನ್ನು ಸಲ್ಲಿಸುವುದಕ್ಕಾಗಿ ಇರುವ ಕೊನೆಯ ದಿನಾಂಕದಂದು 55 ವರ್ಷಗಳ ವಯಸ್ಸನ್ನು ಮೀರಿರಬಾರದು.

(2) ಗರಿಷ್ಠ 150 ಅಂಕಗಳನ್ನು ಒಳಗೊಂಡಿರುವ ಏಕ ಪತ್ರಿಕೆಯ ಕನ್ನಡ ಭಾಷಾ ಪರೀಕ್ಷೆಯಲ್ಲಿ ಅರ್ಹನಾಗದ ಹಾಗೂ ಎಸ್.ಎಸ್.ಎಲ್.ಸಿ. ಮಟ್ಟದಲ್ಲಿನ ಕನ್ನಡ ಜ್ಞಾನದ ಕುರಿತಾದ ಸದರಿ ಪರೀಕ್ಷೆಯಲ್ಲಿ ಕನಿಷ್ಠ 50 ಅಂಕಗಳನ್ನು ಗಳಿಸದ ಹೊರತು, ಯಾವೊಬ್ಬ ಅಭ್ಯರ್ಥಿಯು ಪ್ರಾಂಶುಪಾಲರು (ಸ್ನಾತಕ ಶಿಕ್ಷಣ) ಹುದ್ದೆಗೆ ಅರ್ಹನಾಗಿರತಕ್ಕದ್ದಲ್ಲ:

ಪರಂತು, ಅಭ್ಯರ್ಥಿಯು, ಎಸ್.ಎಸ್.ಎಲ್.ಸಿ. ಪರೀಕ್ಷೆ ಅಥವಾ ಯಾವುದೇ ತತ್ಸಮಾನ ಪರೀಕ್ಷೆ ಅಥವಾ ಎಸ್.ಎಸ್.ಎಲ್.ಸಿ. ಗಿಂತ ಮೇಲಿನ ಹಂತದ ಯಾವುದೇ ಪರೀಕ್ಷೆಯಲ್ಲಿ, ಕನ್ನಡವನ್ನು ಪ್ರಥಮ ಭಾಷೆ ಅಥವಾ ದ್ವಿತೀಯ ಭಾಷೆ ಅಥವಾ ಐಚ್ಛಿಕ ವಿಷಯವಾಗಿ (ಆದರೆ ಅದು ಸಂಯೋಜಿತ ಪತ್ರಿಕೆಯಲ್ಲಿ ಒಂದು ವಿಷಯವಾಗಿರಬಾರದು) ತೆಗೆದುಕೊಂಡು ತೇರ್ಗಡೆಯಾಗಿದ್ದರೆ ಅಥವಾ ಕನ್ನಡ ಮಾಧ್ಯಮದಲ್ಲಿ ತೇರ್ಗಡೆಯಾಗಿದ್ದರೆ, ಅಂಥ ಅಭ್ಯರ್ಥಿಗೆ ಕನ್ನಡ ಭಾಷಾ ಪರೀಕ್ಷೆಯಿಂದ ವಿನಾಯಿತಿ ಇರುತ್ತದೆ.

***4. ಆಯ್ಕೆ ಪ್ರಾಧಿಕಾರದ ರಚನೆ:- (1)*** ಈ ನಿಯಮಗಳ ಅಡಿಯಲ್ಲಿ, ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಪ್ರಾಂಶುಪಾಲರು (ಸ್ನಾತಕ ಶಿಕ್ಷಣ) ನೇಮಕಾತಿಗಾಗಿ, ವ್ಯಕ್ತಿಗಳನ್ನು ಆಯ್ಕೆ ಮಾಡುವುದಕ್ಕೆ ಸಂಬಂಧಿಸಿದಂತೆ ಈ ಮುಂದಿನವರನ್ನು ಒಳಗೊಂಡ ಒಂದು ಆಯ್ಕೆ ಪ್ರಾಧಿಕಾರ ಇರತಕ್ಕದ್ದು, ಎಂದರೆ:-

| | | |
|---|---|---|
| 1. | ಕಾಲೇಜು ಶಿಕ್ಷಣ ಆಯುಕ್ತರು | ಅಧ್ಯಕ್ಷರು |
| 2. | ಕಾಲೇಜು ಶಿಕ್ಷಣ ನಿರ್ದೇಶಕರು | ಸದಸ್ಯರು |
| 3. | ಕಾಲೇಜು ಶಿಕ್ಷಣ ಇಲಾಖೆಯ ಹೆಚ್ಚುವರಿ ನಿರ್ದೇಶಕರು | ಸದಸ್ಯರು |
| 4. | ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯಿಂದ ಸರ್ಕಾರದ ಉಪ ಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಲ್ಲದ ಒಬ್ಬರು ಪ್ರತಿನಿಧಿ | ಸದಸ್ಯರು |
| 5. | ಸಮಾಜ ಕಲ್ಯಾಣ ಇಲಾಖೆಯಿಂದ ಸರ್ಕಾರದ ಉಪ ಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಲ್ಲದ ಒಬ್ಬರು ಪ್ರತಿನಿಧಿ | ಸದಸ್ಯರು |
| 6. | ಕಾಲೇಜು ಶಿಕ್ಷಣ ಇಲಾಖೆಯ ಮುಖ್ಯ ಆಡಳಿತಾಧಿಕಾರಿಗಳು | ಸದಸ್ಯ ಕಾರ್ಯದರ್ಶಿ |

(2) ಆಯ್ಕೆ ಪ್ರಾಧಿಕಾರದ ಸಭೆಗೆ ಸಂಬಂಧಿಸಿದ ಕೋರಂ ನಾಲ್ಕು ಆಗಿರತಕ್ಕದ್ದು.

***5. ಖಾಲಿ ಹುದ್ದೆಗಳ ಅಧಿಸೂಚನೆ.-*** (1) ಸರ್ಕಾರವು ನೇರನೇಮಕಾತಿಗೆ ಅನ್ವಯಿಸುವಂತೆ ಮೀಸಲಾತಿ ನೀತಿಗೆ ಅನುಸಾರವಾಗಿ ಹೊರಡಿಸಿರುವ, ಈ ನಿಯಮಗಳ ಅಡಿಯಲ್ಲಿ ಭರ್ತಿ ಮಾಡಬೇಕಾದ ಖಾಲಿ ಹುದ್ದೆಗಳ ಮಾಹಿತಿಯನ್ನು ನೇಮಕಾತಿ ಪ್ರಾಧಿಕಾರವು ಆಯ್ಕೆ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು.

(2) ಅದನ್ನು ಪರಿಶೀಲಿಸಿದ ತರುವಾಯ, ಮೀಸಲಾತಿ ನೀತಿಗೆ ಅನುಸಾರವಾಗಿ ಭರ್ತಿ ಮಾಡಬೇಕಾದ ಖಾಲಿ ಹುದ್ದೆಗಳ ಮಾಹಿತಿಯನ್ನು ಆಯ್ಕೆ ಪ್ರಾಧಿಕಾರವು ಪರೀಕ್ಷಾ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು.

***6. ಅರ್ಜಿಗಳನ್ನು ಆಹ್ವಾನಿಸುವುದು.-*** ಭರ್ತಿಮಾಡಬೇಕಾದ ಖಾಲಿಹುದ್ದೆಗಳ ಮಾಹಿತಿಯನ್ನು ಸ್ವೀಕರಿಸಿದ ತರುವಾಯ ಪರೀಕ್ಷಾ ಪ್ರಾಧಿಕಾರವು, ರಾಜ್ಯದಲ್ಲಿ ಹೆಚ್ಚು ಪ್ರಸಾರದಲ್ಲಿರುವ ಕನಿಷ್ಠ ಮೂರು ಪ್ರಮುಖ ಕನ್ನಡ ವೃತ್ತ ಪತ್ರಿಕೆಗಳಲ್ಲಿ ಮತ್ತು ಮೂರು ಪ್ರಮುಖ ಇಂಗ್ಲಿಷ್ ವೃತ್ತ ಪತ್ರಿಕೆಗಳಲ್ಲಿ ವ್ಯಾಪಕ ಪ್ರಚಾರ ನೀಡುವ ಮೂಲಕ, ಅದು ನಿರ್ದಿಷ್ಟಪಡಿಸಿರುವ ನಮೂನೆಯಲ್ಲಿ ಎಲ್ಲಾ ಅರ್ಹ ಅಭ್ಯರ್ಥಿಗಳ ಅರ್ಜಿಗಳನ್ನು

ಆಹ್ವಾನಿಸತಕ್ಕದ್ದು. ಈ ಜಾಹೀರಾತಿನಲ್ಲಿ ಅರ್ಹತಾ ಷರತ್ತುಗಳು, ಅನ್ವಯವಾಗುವ ಆಯ್ಕೆ ವಿಧಾನ, ಭರ್ತಿ ಮಾಡಬೇಕಾದ ಖಾಲಿ ಹುದ್ದೆಗಳ ತಾತ್ಕಾಲಿಕ ಸಂಖ್ಯೆ ಮತ್ತು ರಾಜ್ಯದ ಮೀಸಲಾತಿ ನೀತಿಗನುಸಾರವಾಗಿ ಮಾಡಿರುವ ಅವುಗಳ ವರ್ಗೀಕರಣದ ಮಾಹಿತಿಗಳನ್ನು ಸಹ ನೀಡತಕ್ಕದ್ದು.

*7. ಆಯ್ಕೆ ಪದ್ಧತಿ:–* ಈ ನಿಯಮಗಳ ಅಡಿಯಲ್ಲಿ ನೇರ ನೇಮಕಾತಿಯ ವಿಧಾನವು, ಪರೀಕ್ಷಾ ಪ್ರಾಧಿಕಾರ ನಡೆಸಿದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಪರಿಗಣನೆಗೆ ತೆಗೆದುಕೊಂಡು ನಿರ್ಧರಿಸಲಾದ ಮೆರಿಟ್ ಆಧಾರದಲ್ಲಿ ಇರತಕ್ಕದ್ದು.

*8. ಸ್ಪರ್ಧಾತ್ಮಕ ಪರೀಕ್ಷೆಗಳ ವಿಧಾನ:–* ಪರೀಕ್ಷಾ ಪ್ರಾಧಿಕಾರ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗೆ ಎಲ್ಲಾ ಅರ್ಹ ಅಭ್ಯರ್ಥಿಗಳು ಹಾಜರಾಗತಕ್ಕದ್ದು. ಸ್ಪರ್ಧಾತ್ಮಕ ಪರೀಕ್ಷೆಯನ್ನು ಈ ಮುಂದಿನ ರೀತಿಯಲ್ಲಿ ನಡೆಸತಕ್ಕದ್ದು, ಎಂದರೆ:–

02 ಗಂಟೆಗಳ ಅವಧಿಯ ಲಿಖಿತ ಪರೀಕ್ಷೆ:– ಈ ಪರೀಕ್ಷೆಯು ಸಾಮಾನ್ಯ ಜ್ಞಾನ, ಗ್ರಹಿಕಾ ಸಾಮರ್ಥ್ಯ, ಪಿಂಚಣಿ ಮತ್ತು ವೇತನ ಲೆಕ್ಕಾಚಾರ, ಸಾರ್ವಜನಿಕ ಸಂಗ್ರಹಣೆ, ಅಧಿನಿಯಮಗಳು ಮತ್ತು ನಿಯಮಗಳು ಕರ್ನಾಟಕ ಸಿವಿಲ್ ಸೇವಾ ನಿಯಮಗಳು ಅಥವಾ ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ ನಿಯಮಗಳು ಅಥವಾ ಕರ್ನಾಟಕ ಆರ್ಥಿಕ ಸಂಹಿತೆ ಅಥವಾ ಕರ್ನಾಟಕ ಶಿಕ್ಷಣ ಅಧಿನಿಯಮ), ಪಠ್ಯೇತರ ಚಟುವಟಿಕೆಗಳು (ಎನ್‌ಎಸ್‌ಎಸ್/ಎನ್‌ಸಿಸಿ), ಕಂಪ್ಯೂಟರ್ ಜ್ಞಾನ, ತಾರ್ಕಿಕ ಜ್ಞಾನ ಮತ್ತು ನೈತಿಕತೆಯ ವಿಷಯಗಳನ್ನು ಒಳಗೊಂಡ ಬಹು ಆಯ್ಕೆ ಪ್ರಶ್ನೆಗಳ (ಕನ್ನಡ ಅಥವಾ ಇಂಗ್ಲಿಷ್‌ನಲ್ಲಿ) ವಸ್ತುನಿಷ್ಠ ಗರಿಷ್ಠ 100 ಅಂಕಗಳನ್ನು ಒಳಗೊಂಡಿರುತ್ತದೆ.

*9. ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿ.–*(1) ಪರೀಕ್ಷಾ ಪ್ರಾಧಿಕಾರವು, ಅಭ್ಯರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಮೇಲೆ ನಿರ್ಧರಿಸಿದ ಮೆರಿಟ್ ಆಧಾರದಲ್ಲಿ ಅಂತಿಮ ಮೆರಿಟ್ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು, ಮತ್ತು ಪ್ರಾಂಶುಪಾಲರು (ಸ್ನಾತಕ ಶಿಕ್ಷಣ) ಹುದ್ದೆಯ ನೇಮಕಾತಿಗಾಗಿ ಅರ್ಹರಿರುವ (ಅಧಿಸೂಚಿಸಿದ ಖಾಲಿ ಹುದ್ದೆಗಳಿಗೆ ಸಮಾನವಾದ) ಅಭ್ಯರ್ಥಿಗಳ ಪಟ್ಟಿಯನ್ನು ಅಧಿಸೂಚಿಸತಕ್ಕದ್ದು, ಹಾಗೂ ಇಬ್ಬರು ಅದಕ್ಕಿಂತ ಹೆಚ್ಚಿನ ಅಭ್ಯರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗಳಿಸಿರುವ ಒಟ್ಟು ಅಂಕಗಳ ಸರಾಸರಿ ಶೇಕಡವಾರು ಸಮನಾಗಿದ್ದಲ್ಲಿ, ಅಂಥ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಮೆರಿಟ್ ಕ್ರಮಾಂಕವನ್ನು ಅವರ ವಯಸ್ಸನ್ನು ಆಧರಿಸಿ ನಿಗದಿಪಡಿಸತಕ್ಕದ್ದು, ವಯಸ್ಸಿನಲ್ಲಿ ಹಿರಿಯನಾದ ವ್ಯಕ್ತಿ ಅಥವಾ ವ್ಯಕ್ತಿಗಳನ್ನು ಮೆರಿಟ್ ಕ್ರಮಾಂಕದ ಮೇಲಿನ ಸ್ಥಾನದಲ್ಲಿ ಇರಿಸತಕ್ಕದ್ದು. ಯಾವುದೇ ಸಂದರ್ಶನವು ಇರತಕ್ಕದ್ದಲ್ಲ.

(2) (1)ನೇ ಉಪನಿಯಮದ ಅನುಸಾರವಾಗಿ ಸಿದ್ಧಪಡಿಸಿದ ಮೆರಿಟ್ ಪಟ್ಟಿಯನ್ನು, ಪರೀಕ್ಷಾ ಪ್ರಾಧಿಕಾರವು ಆಯ್ಕೆ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು. ಆಯ್ಕೆ ಪ್ರಾಧಿಕಾರವು, ಮೆರಿಟ್ ಪಟ್ಟಿಯಲ್ಲಿ ಹೆಸರಿರುವ ಅಭ್ಯರ್ಥಿಗಳ ದಾಖಲೆಗಳನ್ನು ಪರಿಶೀಲಿಸತಕ್ಕದ್ದು ಮತ್ತು ಆನಂತರ, ಅಧಿಸೂಚಿಸಿದ ಖಾಲಿ ಹುದ್ದೆಗಳಿಗನುಸಾರವಾಗಿ ಆಯ್ಕೆಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು. ಆಯ್ಕೆ ಪಟ್ಟಿಯನ್ನು ಸಿದ್ಧಪಡಿಸುವಾಗ, ಆಯ್ಕೆ ಪ್ರಾಧಿಕಾರವು ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು, ಇತರ ಹಿಂದುಳಿದ ವರ್ಗಗಳು ಮತ್ತು ಭಾರತ ಸಂವಿಧಾನದ 371(ಜೆ) ಪ್ರವರ್ಗಗಳಿಗೆ ಸೇರಿರುವ ವ್ಯಕ್ತಿಗಳಿಗಾಗಿ, ನೇಮಕಾತಿಗಳು ಮತ್ತು ಹುದ್ದೆಗಳ ಮೀಸಲಾತಿಯ ವಿಷಯದಲ್ಲಿ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿರುವ ಆದೇಶಗಳನ್ನು ಪಾಲಿಸತಕ್ಕದ್ದು,

(3) ಆಯ್ಕೆ ಪ್ರಾಧಿಕಾರವು, ಪರೀಕ್ಷಾ ಪ್ರಾಧಿಕಾರ ನೀಡಿರುವ ಮೆರಿಟ್ ಪಟ್ಟಿಯನ್ನು ಆಧರಿಸಿ, (1)ನೇ ಉಪನಿಯಮದ ಅಡಿಯಲ್ಲಿ ಸಿದ್ಧಪಡಿಸಿರುವ ಮುಖ್ಯ ಆಯ್ಕೆ ಪಟ್ಟಿಯಲ್ಲಿ ಸೇರಿಲ್ಲದಿರುವ ಅಭ್ಯರ್ಥಿಗಳ ಒಂದು ಹೆಚ್ಚುವರಿ ಪಟ್ಟಿಯನ್ನು ಸಹ ಸಿದ್ಧಪಡಿಸತಕ್ಕದ್ದು. ಹೆಚ್ಚುವರಿ ಪಟ್ಟಿಗಳಲ್ಲಿ ಸೇರಿಸಬೇಕಾಗಿರುವ ಅಭ್ಯರ್ಥಿಗಳ ಸಂಖ್ಯೆ ಸಾಧ್ಯವಾದಷ್ಟು ಮಟ್ಟಿಗೆ, (1)ನೇ ಉಪನಿಯಮದ ಅಡಿಯಲ್ಲಿ ಸಿದ್ಧಪಡಿಸಿರುವ ಪಟ್ಟಿಯಲ್ಲಿರುವ ಪ್ರತಿಯೊಂದು ಮೀಸಲಾತಿ ಪ್ರವರ್ಗಗಳಲ್ಲಿ (ಸಮಾನಾಂತರ ಮತ್ತು ಲಂಬ) ಇರುವ ಅಭ್ಯರ್ಥಿಗಳ ಸಂಖ್ಯೆಯ ಶೇಕಡಾ 10 ರಷ್ಟು ಇರತಕ್ಕದ್ದು. ಈ ಹೆಚ್ಚುವರಿ ಪಟ್ಟಿಯಲ್ಲಿ, (1)ನೇ ಉಪನಿಯಮದ ಅಡಿಯಲ್ಲಿ ಸಿದ್ಧಪಡಿಸಿರುವ ಪಟ್ಟಿಯಲ್ಲಿ ಇರುವ ಪ್ರತಿಯೊಂದು ಮೀಸಲಾತಿ ಪ್ರವರ್ಗಗಳಿಗೆ (ಸಮಾನಾಂತರ ಮತ್ತು ಲಂಬ) ಸೇರಿರುವ ಕನಿಷ್ಠ ಒಬ್ಬ ಅಭ್ಯರ್ಥಿಯಾದರೂ ಇರತಕ್ಕದ್ದು. (1)ನೇ ಉಪನಿಯಮದ ಅಡಿಯಲ್ಲಿ

ಸಿದ್ಧಪಡಿಸಿರುವ ಪಟ್ಟಿಯಲ್ಲಿ ಹೆಸರು ಸೇರಿರುವ ಅಭ್ಯರ್ಥಿ ನಿರ್ದಿಷ್ಟಪಡಿಸಿರುವ ಅವಧಿಯೊಳಗೆ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವಲ್ಲಿ ವಿಫಲನಾದರೆ, ಆಗ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ವಿಫಲನಾದ ಅಭ್ಯರ್ಥಿಯ ಮೀಸಲಾತಿ ಪ್ರವರ್ಗಕ್ಕೆ ಸೇರಿದ ಅಭ್ಯರ್ಥಿಯನ್ನು, ಹೆಚ್ಚುವರಿ ಪಟ್ಟಿಯಿಂದ ನೇಮಕ ಮಾಡಿಕೊಳ್ಳತಕ್ಕದ್ದು.

(4) (2) ಮತ್ತು (4)ನೇ ಉಪನಿಯಮಗಳ ಅಡಿಯಲ್ಲಿ ಸಿದ್ಧಪಡಿಸಿರುವ ಪಟ್ಟಿಯನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಮತ್ತು ಸರ್ಕಾರದ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬಹುಮಹಡಿ ಕಟ್ಟಡ, ಬೆಂಗಳೂರು, ಇವರ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸತಕ್ಕದ್ದು ಮತ್ತು ಕಾಲೇಜು ಶಿಕ್ಷಣ ಇಲಾಖೆಯ ಜಾಲತಾಣದಲ್ಲಿ ಅಪ್‌ಲೋಡ್ ಮಾಡತಕ್ಕದ್ದು. ಸದರಿ ಪಟ್ಟಿಗಳು ಆಯ್ಕೆ ಪ್ರಾಧಿಕಾರವು (2)ನೇ ಉಪನಿಯಮದ ಅಡಿಯಲ್ಲಿ ಸಿದ್ಧಪಡಿಸಿರುವ ಆಯ್ಕೆಪಟ್ಟಿಯು ಪ್ರಕಟವಾದ ದಿನಾಂಕದಿಂದ ಎರಡು ವರ್ಷಗಳವರೆಗೆ ಅಥವಾ ಮುಂದಿನ ನೇಮಕಾತಿ ಪ್ರಕ್ರಿಯೆಯಲ್ಲಿನ ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸುವವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಸಿಂಧುವಾಗಿರತಕ್ಕದ್ದು.

**10. ಅಭ್ಯರ್ಥಿಗಳನ್ನು ನೇಮಕಾತಿ.–** (1) 9ನೇ ನಿಯಮದ ಅಡಿಯಲ್ಲಿ ಆಯ್ಕೆ ಪ್ರಾಧಿಕಾರವು ಸಿದ್ಧಪಡಿಸಿದ ಪಟ್ಟಿಗಳಲ್ಲಿ ಹೆಸರು ಸೇರಿರುವ ಅಭ್ಯರ್ಥಿಗಳನ್ನು, ನೇಮಕಾತಿ ಪ್ರಾಧಿಕಾರವು ತಾನು ಸೂಕ್ತವೆಂದು ಭಾವಿಸಬಹುದಾದಂಥ ಪರಿಶೀಲನೆಯನ್ನು ನಡೆಸಿದ ನಂತರ, ಪ್ರತಿಯೊಬ್ಬ ಅಭ್ಯರ್ಥಿಯೂ ಹಾಗೆ ನೇಮಕ ಮಾಡಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಎಲ್ಲಾ ದೃಷ್ಟಿಗಳಿಂದಲೂ ಸೂಕ್ತನಾಗಿರುತ್ತಾನೆ ಎಂದು ಮನವರಿಕೆ ಮಾಡಿಕೊಂಡ ತರುವಾಯ, ಅಂತಿಮ ಆಯ್ಕೆ ಪಟ್ಟಿಯಲ್ಲಿ ಅವರ ಹೆಸರುಗಳಿರುವ ಕ್ರಮದಲ್ಲಿ ಖಾಲಿ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಬಹುದು.

(2) 9ನೇ ನಿಯಮದ ಅಡಿಯಲ್ಲಿ ಪ್ರಕಟಿಸಿದ ಆಯ್ಕೆ ಪಟ್ಟಿಯಲ್ಲಿ ಅಭ್ಯರ್ಥಿಯ ಹೆಸರು ಸೇರಿರುವಷ್ಟರಿಂದಲೇ, ಅಭ್ಯರ್ಥಿಗೆ ನೇಮಕಾತಿಗಾಗಿ ಯಾವುದೇ ಹಕ್ಕು ನೀಡಿದಂತಾಗತಕ್ಕದ್ದಲ್ಲ.

(3) ಪ್ರಾಂಶುಪಾಲರುಗಳಾಗಿ (ಸ್ನಾತಕ ಶಿಕ್ಷಣ) ನೇಮಕಗೊಂಡವರು, ಸರ್ಕಾರಿ ಕಾಲೇಜುಗಳಲ್ಲಿ ಪ್ರಾಧ್ಯಾಪಕರು ಅಥವಾ ಸಹ ಪ್ರಾಧ್ಯಾಪಕರುಗಳಾಗಿ ಸಲ್ಲಿಸಿರುವ ಸೇವೆಯನ್ನು ವೇತನ, ರಜೆ ಮತ್ತು ಪಿಂಚಣಿ ಉದ್ದೇಶಕ್ಕಾಗಿ ಪರಿಗಣಿಸತಕ್ಕದ್ದು.

ಪರಂತು, ಸಕ್ಷಮ ಪ್ರಾಧಿಕಾರದಿಂದ ಅನುಮತಿ ಅಥವಾ ನಿರಾಕ್ಷೇಪಣಾ ಪ್ರಮಾಣಪತ್ರ ಪಡೆಯದೆ ಅರ್ಜಿ ಸಲ್ಲಿಸಿರುವವರು, ಪ್ರಾಧ್ಯಾಪಕರು ಅಥವಾ ಸಹ ಪ್ರಾಧ್ಯಾಪಕರುಗಳಾಗಿ ಸಲ್ಲಿಸಿರುವ ಸೇವೆಯನ್ನು ವೇತನ, ರಜೆ ಮತ್ತು ಪಿಂಚಣಿ ಉದ್ದೇಶಕ್ಕಾಗಿ ಪರಿಗಣಿಸುವುದಕ್ಕೆ ಅರ್ಹರಾಗಿರತಕ್ಕದ್ದಲ್ಲ.

(4) ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶಗಳನ್ನು ನೀಡುವುದಕ್ಕೆ ಮುಂಚಿತವಾಗಿ ಸರ್ಕಾರ ಮತ್ತು ಇಲಾಖೆಯು, ಪ್ರಾಂಶುಪಾಲರ ಕರ್ತವ್ಯಗಳನ್ನು ನಿರ್ವಹಿಸುವುದಕ್ಕೆ ಸಂಬಂಧಿಸಿದಂತೆ ರೂಪಿಸಬೇಕಾಗಿರುವ ತರಬೇತಿ ಕಾರ್ಯಕ್ರಮದಲ್ಲಿ ಅವರು ಪಾಲ್ಗೊಳ್ಳುವಂತೆ ಕ್ರಮವಹಿಸತಕ್ಕದ್ದು. ಸದರಿ ತರಬೇತಿ ಕಾರ್ಯಕ್ರಮ ಪೂರ್ಣಗೊಳಿಸಿದ ನಂತರ ಮಾತ್ರವೇ ನೇಮಕಾತಿ ಆದೇಶಗಳನ್ನು ನೀಡತಕ್ಕದ್ದು.

**11. ಅಭ್ಯರ್ಥಿಗಳ ಪದಾವಧಿ.–** (1)ಕರ್ನಾಟಕ ಸಿವಿಲ್ ಸೇವೆಗಳ ನಿಯಮಗಳಿಗನುಸಾರವಾಗಿ, ವಯೋನಿವೃತ್ತಿಗೆ ಒಳಪಟ್ಟು ಪ್ರಾಂಶುಪಾಲರನ್ನು ಐದು ವರ್ಷಗಳ ಅವಧಿಗೆ ನೇಮಕ ಮಾಡಿಕೊಳ್ಳತಕ್ಕದ್ದು, ಈ ನಿಯಮಗಳ ಅನುಸಾರವಾಗಿ ಸರ್ಕಾರವು ರಚಿಸಿದ ಸಮಿತಿಯು ಮಾಡುವ ಕಾರ್ಯನಿರ್ವಹಣಾ ಮೌಲ್ಯಮಾಪನವನ್ನು ಆಧರಿಸಿ, ಮತ್ತೊಂದು ಐದು ವರ್ಷಗಳ ಅವಧಿಗೆ ವಿಸ್ತರಿಸತಕ್ಕದ್ದು.

(2) ಈ ನಿಯಮಗಳ 10ನೇ ನಿಯಮದ ಅಡಿಯಲ್ಲಿ ಪ್ರಾಂಶುಪಾಲರಾಗಿ (ಸ್ನಾತಕ ಶಿಕ್ಷಣ) ನೇಮಕಾತಿ ಆದೇಶ ನೀಡುವುದಕ್ಕೆ ಮುಂಚಿತವಾಗಿ, ಅನುದಾನಿತ ಪದವಿ ಕಾಲೇಜುಗಳಲ್ಲಿ ಪ್ರಾಧ್ಯಾಪಕರು ಅಥವಾ ಸಹ ಪ್ರಾಧ್ಯಾಪಕರುಗಳಾಗಿ ಸಲ್ಲಿಸಿರುವ ಯಾವುದೇ ಸೇವೆಯನ್ನು ವೇತನ ಮತ್ತು ಸೇವಾ ಪ್ರಯೋಜನಗಳಿಗಾಗಿ ಪರಿಗಣಿಸತಕ್ಕದ್ದಲ್ಲ.

(3) 10ನೇ ನಿಯಮದ ಅಡಿಯಲ್ಲಿ ನೇಮಕಾತಿ ಆದೇಶ ನೀಡಲಾಗಿರುವ ಮತ್ತು ದಿನಾಂಕ: 01.04.2006ರ ನಂತರ ಸರ್ಕಾರಿ ಮತ್ತು ಅನುದಾನಿತ ಪದವಿ ಕಾಲೇಜುಗಳಲ್ಲಿ ನೇಮಕಗೊಂಡಿರುವ ಯಾವೊಬ್ಬ ಅಭ್ಯರ್ಥಿಯು, ಪರಿಭಾಷಿತ ಪ್ರಯೋಜನದ ಪಿಂಚಣಿ ಯೋಜನೆ ಮತ್ತು ಮೂರುಪಟ್ಟು ಪ್ರಯೋಜನದ ಯೋಜನೆ ನಿಯಮಗಳಿಗೆ (ಡಿಫೈನ್‌ಡ್ ಬೆನಿಫಿಟ್ ಪೆನ್ಷನ್ ಸ್ಕೀಂ ಅಂಡ್ ಟ್ರಿಪಲ್ ಬೆನಿಫಿಟ್ ಸ್ಕೀಂ ರೂಲ್ಸ್) ಅನುಸಾರವಾಗಿ ಪಿಂಚಣಿಗೆ ಹಕ್ಕುಳ್ಳವನಾಗಿರತಕ್ಕದ್ದಲ್ಲ.

(4) ಐದು ವರ್ಷಗಳ ಪದಾವಧಿ ಮುಕ್ತಾಯಗೊಂಡ ಮೇಲೆ, ಈ ನಿಯಮಗಳ ಅಡಿಯಲ್ಲಿ ಪ್ರಾಂಶುಪಾಲರಾಗಿ (ಸ್ನಾತಕ ಶಿಕ್ಷಣ) ಆಯ್ಕೆಗೊಂಡಿರುವ ಮತ್ತು ಹಾಗೆ ಆಯ್ಕೆಯಾಗುವುದಕ್ಕೆ ಮುಂಚಿತವಾಗಿ ಸರ್ಕಾರಿ ಪದವಿ ಕಾಲೇಜಿನಲ್ಲಿ ಸೇವೆ ಸಲ್ಲಿಸುತ್ತಿದ್ದ ಪ್ರಾಧ್ಯಾಪಕರು ಅಥವಾ ಸಹ ಪ್ರಾಧ್ಯಾಪಕರನ್ನು ಸರ್ಕಾರವು ಯಾವ ಸರ್ಕಾರಿ ಪದವಿ ಕಾಲೇಜಿನಲ್ಲಿ ಸ್ಥಳನಿಯುಕ್ತಿ ಮಾಡಿತ್ತೋ ಅಲ್ಲಿ, ಅವರು ವಯೋನಿವೃತ್ತಿ ವಯಸ್ಸು ಪೂರ್ಣಗೊಳ್ಳುವವರೆಗೆ ಪ್ರಾಧ್ಯಾಪಕರು/ಸಹ ಪ್ರಾಧ್ಯಾಪಕರಾಗಿ ಮುಂದುವರೆಯುವುದಕ್ಕೆ ಹಕ್ಕು ಹೊಂದಿರತಕ್ಕದ್ದು.:

ಪರಂತು, ಪ್ರಾಂಶುಪಾಲರಾಗಿ (ಸ್ನಾತಕ ಶಿಕ್ಷಣ) ನೇಮಕಗೊಂಡವರು ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದ ವಯೋನಿವೃತ್ತಿ ವಯಸ್ಸು ಪೂರ್ಣಗೊಂಡ ದಿನದಂದು ಸೇವೆಯಿಂದ ನಿವೃತ್ತರಾಗತಕ್ಕದ್ದು ಮತ್ತು ಅವರು ಯಾವುದೇ ಕಾರಣಕ್ಕೂ ವಯೋನಿವೃತ್ತಿ ದಿನಾಂಕದ ನಂತರ ಸೇವೆಯಲ್ಲಿ ಮುಂದುವರೆಯತಕ್ಕದ್ದಲ್ಲ.

***12. ಇತರ ನಿಯಮಗಳ ಅನ್ವಯ.***- ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮ, 1978ರ (1990ರ ಕರ್ನಾಟಕ ಅಧಿನಿಯಮ 14) ಅಡಿಯಲ್ಲಿ ರಚಿಸಲಾಗಿರುವ ಅಥವಾ ರಚಿಸಲಾಗಿದೆಯೆಂದು ಭಾವಿಸಲಾಗಿರುವ, ಸರ್ಕಾರಿ ನೌಕರರ ಸೇವಾ ಷರತ್ತುಗಳನ್ನು ನಿರ್ವಹಿಸುವ ಎಲ್ಲಾ ನಿಯಮಗಳು, ಈ ನಿಯಮಗಳ ಉಪಬಂಧಗಳಿಗೆ ಅಸಂಗತವಾಗಿಲ್ಲದಿರುವಷ್ಟರ ಮಟ್ಟಿಗೆ, ಈ ನಿಯಮಗಳ ಅಡಿಯಲ್ಲಿ ಪ್ರಾಂಶುಪಾಲರಾಗಿ (ಸ್ನಾತಕ ಶಿಕ್ಷಣ) ನೇಮಕಗೊಂಡ ವ್ಯಕ್ತಿಗಳಿಗೆ ಅನ್ವಯಿಸತಕ್ಕದ್ದು,

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಜೆ.ಟಿ.ವೆಂಕಟರಾಮು)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ
(ಕಾಲೇಜು ಶಿಕ್ಷಣ)

ವಿಶ್ವವಿದ್ಯಾಲಯ ಮತ್ತು ಕಾಲೇಜು ಶಿಕ್ಷಕರ ಶೈಕ್ಷಣಿಕ ಅಥವಾ ಅನುಬಂಧ (3ನೇ ನಿಯಮ ನೋಡಿ) ಸಂಶೋಧನಾ ಅಂಕಗಳನ್ನು ಲೆಕ್ಕ ಹಾಕುವುದಕ್ಕೆ ಸಂಬಂಧಿಸಿದ ಕಾರ್ಯವಿಧಾನ

(ಅಂಕನಿರ್ಧರಣೆಯು, ಶಿಕ್ಷಕರು ಒದಗಿಸುವ ದಾಖಲೆಗಳಾದ:, ಪ್ರಕಟಣೆಯ ಪ್ರತಿ, ವಿಶ್ವವಿದ್ಯಾಲಯ ನೀಡಿರುವ ಯೋಜನೆ ಮಂಜೂರಾತಿ ಪತ್ರ, ಬಳಕೆ ಮತ್ತು ಪೂರ್ಣಗೊಂಡಿರುವುದರ ಸಂಬಂಧದ ಪ್ರಮಾಣಪತ್ರಗಳು ಹಾಗೂ ಹಕ್ಕುಸ್ವಾಮ್ಯಕ್ಕೆ ಅರ್ಜಿ ಸಲ್ಲಿಸಿರುವುದರ ಸ್ವೀಕೃತಿಗಳು ಮತ್ತು ಅನುಮೋದನೆ ಪತ್ರಗಳು, ವಿದ್ಯಾರ್ಥಿಗಳಿಗೆ ಪಿಎಚ್.ಡಿ ಪದವಿ ಪ್ರದಾನಗೊಂಡಿರುವುದರ ಪತ್ರಗಳು, ಮೊದಲಾದವುಗಳನ್ನು ಆಧರಿಸಿರತಕ್ಕದ್ದು)

| ಕ್ರಮ ಸಂಖ್ಯೆ | ಶೈಕ್ಷಣಿಕ/ಸಂಶೋಧನಾ ಚಟುವಟಿಕೆ | ವಿಜ್ಞಾನ/ ಇಂಜಿನಿಯರಿಂಗ್/ ಕೃಷಿ/ವೈದ್ಯಕೀಯ/ ಪಶುವೈದ್ಯಕೀಯ ವಿಜ್ಞಾನಗಳ ಸಿಬ್ಬಂದಿ | ಭಾಷೆಗಳು/ಮಾನವಿಕಗಳು/ ಕಲೆಗಳು/ಸಾಮಾಜಿಕ ವಿಜ್ಞಾನಗಳು/ ಗ್ರಂಥಾಲಯ/ಶಿಕ್ಷಣ/ದೈಹಿಕ ಶಿಕ್ಷಣ/ವಾಣಿಜ್ಯ/ ವ್ಯವಸ್ಥಾಪನೆ ಮತ್ತು ಇತರ ಸಂಬಂಧಪಟ್ಟ ವ್ಯಾಸಂಗ ವಿಷಯಗಳ ಸಿಬ್ಬಂದಿ |
|---|---|---|---|
| 1 | ಪ್ರೌಢ ಸಂಶೋಧನಾ ಪತ್ರಿಕೆಗಳು (ಪೀರ್ ರಿವ್ಯೂಡ್) ಅಥವಾ ಯು.ಜಿ.ಸಿ ಪಟ್ಟಿ ಮಾಡಿರುವ ಪತ್ರಿಕೆಗಳಲ್ಲಿ ಸಂಶೋಧನಾ ಲೇಖನಗಳು | 08 ಪ್ರತಿ ಲೇಖನಕ್ಕೆ | 10 ಪ್ರತಿ ಲೇಖನಕ್ಕೆ |
| 2 | ಪ್ರಕಟಣೆಗಳು (ಸಂಶೋಧನಾ ಲೇಖನಗಳನ್ನು ಹೊರತುಪಡಿಸಿ) | | |
| | ರಚಿಸಿರುವ ಪುಸ್ತಕಗಳನ್ನು ಈ ಮುಂದಿನ ಪ್ರಕಾಶಕರುಗಳು ಪ್ರಕಟಿಸಿದ್ದರೆ. | | |
| | ಅಂತರರಾಷ್ಟ್ರೀಯ ಪ್ರಕಾಶಕರು | 12 | 12 |
| | ರಾಷ್ಟ್ರೀಯ ಪ್ರಕಾಶಕರು | 10 | 10 |
| | ಸಂಪಾದಿಸಿರುವ ಪುಸ್ತಕದಲ್ಲಿ ಬರೆದಿರುವ ಅಧ್ಯಾಯಕ್ಕೆ | 05 | 05 |
| | ಅಂತರರಾಷ್ಟ್ರೀಯ ಪ್ರಕಾಶಕರು ಪ್ರಕಟಿಸಿರುವ ಪುಸ್ತಕದ ಸಂಪಾದಕರಾಗಿದ್ದರೆ | 10 | 10 |
| | ರಾಷ್ಟ್ರೀಯ ಪ್ರಕಾಶಕರು ಪ್ರಕಟಿಸಿರುವ ಪುಸ್ತಕದ ಸಂಪಾದಕರಾಗಿದ್ದರೆ | 08 | 08 |
| | ಅರ್ಹ ಸಿಬ್ಬಂದಿಗಳು ಭಾರತೀಯ ಮತ್ತು ವಿದೇಶಿ ಭಾಷೆಗಳಲ್ಲಿ ಭಾಷಾಂತರ ಮಾಡಿರುವುದು | | |
| | ಅಧ್ಯಾಯ ಅಥವಾ ಸಂಶೋಧನಾ ಲೇಖನ | 03 | 03 |
| | ಪುಸ್ತಕ | 08 | 08 |

| | | | |
|---|---|---|---|
| 3 | ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನ ಆಧಾರಿತ ಬೋಧನಾ ಕಲಿಕಾ ಶಿಕ್ಷಣಶಾಸ್ತ್ರ ಮತ್ತು ಪಠ್ಯಾಂಶಗಳನ್ನು ಸೃಜಿಸಿರುವುದು ಹಾಗೂ ಹೊಸ ಮತ್ತು ನೂತನ ಕೋರ್ಸ್‌ಗಳು ಹಾಗೂ ಪಠ್ಯಕ್ರಮವನ್ನು ರೂಪಿಸಿರುವುದು | | |
| | (ಎ) ನೂತನ ಶಿಕ್ಷಣಶಾಸ್ತ್ರವನ್ನು ರೂಪಿಸಿರುವುದು | 05 | 05 |
| | (ಬಿ) ಹೊಸ ಪಠ್ಯಕ್ರಮ ಮತ್ತು ಕೋರ್ಸ್‌ಗಳನ್ನು ವಿನ್ಯಾಸಗೊಳಿಸಿರುವುದು | 02 ಪ್ರತಿ ಪಠ್ಯಕ್ರಮ/ಕೋರ್ಸಿಗೆ | 02 ಪ್ರತಿ ಪಠ್ಯಕ್ರಮ/ಕೋರ್ಸಿಗೆ |
| | (ಸಿ) ಎಂಓಓಸಿ ಗಳು (ಮೂಕ್) | | |
| | 4 ಅವಧಿಗಳಲ್ಲಿ (ಕ್ವಾಡ್ರಂಟ್ಸ್) ಸಮಗ್ರ ಎಂಓಓಸಿ ಕೋರ್ಸ್‌ನ್ನು ರೂಪಿಸಿರುವುದು (04 ಕ್ರೆಡಿಟ್ ಕೋರ್ಸ್). (ಕಡಿಮೆ ಕ್ರೆಡಿಟ್‌ಗಳ ಎಂಓಓಸಿ ಕೋರ್ಸ್ ಆಗಿದ್ದರೆ (05 ಅಂಕಗಳು/ಕ್ರೆಡಿಟ್) | 20 | 20 |
| | ಎಂಓಓಸಿ (04 ಅವಧಿ (ಕ್ವಾಡ್ರಂಟ್ಸ್) ಗಳಲ್ಲಿ ರೂಪಿಸಿರುವುದು) ಪ್ರತಿ ಮಾಡ್ಯೂಲ್/ಕೋರ್ಸ್‌ಗೆ | 05 | 05 |
| | ಎಂಓಓಸಿ ನ ಪ್ರತಿಯೊಂದು ಮಾಡ್ಯೂಲ್‌ಗೆ ಸಂಬಂಧಿಸಿದ ಪಠ್ಯಾಂಶ ಬರಹಗಾರ/ವಿಷಯ ಪರಿಣಿತರಿಗೆ | 02 | 02 |
| | ಎಂಓಓಸಿ ಗೆ ಸಂಬಂಧಿಸಿದ ಕೋರ್ಸ್ ಸಮನ್ವಯಕಾರರಿಗೆ (04 ಕ್ರೆಡಿಟ್ ಕೋರ್ಸ್). (ಕಡಿಮೆ ಕ್ರೆಡಿಟ್ ಎಂಓಓಸಿ ಆಗಿದ್ದರೆ 02 ಅಂಕಗಳು /ಕ್ರೆಡಿಟ್) | 08 | 08 |
| | (ಡಿ) ಇ–ಪಠ್ಯಾಂಶ | | |
| | ಸಮಗ್ರ ಕೋರ್ಸ್/ಇ–ಪುಸ್ತಕಕ್ಕೆ ಸಂಬಂಧಿಸಿದಂತೆ 4 ಅವಧಿಗಳಲ್ಲಿ (ಕ್ವಾಡ್ರಂಟ್ಸ್)ಇ– ಪಠ್ಯಾಂಶವನ್ನು ರೂಪಿಸಿರುವುದು | 12 | 12 |
| | ಪ್ರತಿ ಮಾಡ್ಯೂಲ್‌ಗೆ ಇ– ಪಠ್ಯಾಂಶ (4 ಅವಧಿಗಳಲ್ಲಿ (ಕ್ವಾಡ್ರಂಟ್ಸ್) ರೂಪಿಸಿರುವುದು | 05 | 05 |
| | ಸಮಗ್ರ ಕೋರ್ಸ್/ಪತ್ರಿಕೆ/ಇ–ಪುಸ್ತಕದಲ್ಲಿ ಇ–ಪಠ್ಯಾಂಶ ಮಾಡ್ಯೂಲ್ ರೂಪಿಸಲು ನೆರವಾಗಿರುವುದು (ಕನಿಷ್ಠ ಒಂದು ಅವಧಿಗೆ (ಕ್ವಾಡ್ರಂಟ್ಸ್) | 02 | 02 |
| | ಸಮಗ್ರ ಕೋರ್ಸ್/ಪತ್ರಿಕೆ/ಇ–ಪುಸ್ತಕಕ್ಕೆ ಸಂಬಂಧಿಸಿದಂತೆ, ಇ–ಪಠ್ಯಾಂಶವನ್ನು ಸಂಪಾದಿಸಿರುವುದು | 10 | 10 |

| | | | |
|---|---|---|---|
| 4 | (ಎ) ಸಂಶೋಧನಾ ಮಾರ್ಗದರ್ಶನ | | |
| | ಪಿಎಚ್.ಡಿ ಪದವಿ | 10 ಪ್ರತಿಯೊಂದು ಪದವಿ ಪ್ರದಾನವಾಗಿರುವುದಕ್ಕೆ 05 ಪ್ರತಿಯೊಂದು ಮಹಾಪ್ರಬಂಧ ಸಲ್ಲಿಸಿರುವುದಕ್ಕೆ | 10 ಪ್ರತಿಯೊಂದು ಪದವಿ ಪ್ರದಾನವಾಗಿರುವುದಕ್ಕೆ. 05 ಪ್ರತಿಯೊಂದು ಮಹಾಪ್ರಬಂಧ ಸಲ್ಲಿಸಿರುವುದಕ್ಕೆ |
| | ಎಂ.ಫಿಲ್/ಸ್ನಾತಕೋತ್ತರ ಪದವಿ ನಿಬಂಧ | 02 ಪ್ರತಿಯೊಂದು ಪದವಿ ಪ್ರದಾನವಾಗಿರುವುದಕ್ಕೆ | 02 ಪ್ರತಿಯೊಂದು ಪದವಿ ಪ್ರದಾನವಾಗಿರುವುದಕ್ಕೆ |
| | (ಬಿ) ಪೂರ್ಣಗೊಂಡಿರುವ ಸಂಶೋಧನಾ ಯೋಜನೆಗಳು | | |
| | 10 ಲಕ್ಷಕ್ಕಿಂತ ಹೆಚ್ಚು | 10 | 10 |
| | 10 ಲಕ್ಷಕ್ಕಿಂತ ಕಡಿಮೆ | 05 | 05 |
| | (ಸಿ) ಪ್ರಗತಿಯಲ್ಲಿರುವ ಸಂಶೋಧನಾ ಯೋಜನೆಗಳು | | |
| | 10 ಲಕ್ಷಕ್ಕಿಂತ ಹೆಚ್ಚು | 05 | 05 |
| | 10 ಲಕ್ಷಕ್ಕಿಂತ ಕಡಿಮೆ | 02 | 02 |
| | (ಡಿ) ಸಮಾಲೋಚನಾ ಸೇವೆ (ಕನ್ಸಲ್‌ಟೆನ್ಸಿ) | 03 | 03 |
| 5 | (ಎ) ಹಕ್ಕು ಸ್ವಾಮ್ಯಗಳು | | |
| | ಅಂತರರಾಷ್ಟ್ರೀಯ | 10 | 10 |
| | ರಾಷ್ಟ್ರೀಯ | 07 | 07 |
| | (ಬಿ) "ನೀತಿ" ದಸ್ತಾವೇಜು (ವಿಶ್ವಸಂಸ್ಥೆ/ಯುನಸ್ಕೋ/ವಿಶ್ವಬ್ಯಾಂಕ್/ಅಂತರ ರಾಷ್ಟ್ರೀಯ ಹಣಕಾಸು ನಿಧಿ, ಮೊದಲಾದಂಥ ಅಂತರರಾಷ್ಟ್ರೀಯ ನಿಕಾಯ/ಸಂಸ್ಥೆಗಳಿಗೆ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರಗಳಿಗೆ ಸಲ್ಲಿಸಿರುವುದು) | | |
| | ಅಂತರರಾಷ್ಟ್ರೀಯ | 10 | 10 |
| | ರಾಷ್ಟ್ರೀಯ | 07 | 07 |
| | ರಾಜ್ಯ | 04 | 04 |
| | (ಸಿ) ಬಹುಮಾನಗಳು/ಫೆಲೋಶಿಪ್‌ಗಳು | | |
| | ಅಂತರರಾಷ್ಟ್ರೀಯ | 07 | 07 |
| | ರಾಷ್ಟ್ರೀಯ | 05 | 05 |

| | | | |
|---|---|---|---|
| 6 | ವಿಚಾರ ಸಂಕಿರಣಗಳಲ್ಲಿ/ಸಮ್ಮೇಳನಗಳಲ್ಲಿ ಉಪನ್ಯಾಸ ನೀಡಲು ಆಹ್ವಾನಿಸಿರುವುದು/ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿರುವುದು/ ಲೇಖನ ಮಂಡಿಸಿರುವುದು/ಸಮ್ಮೇಳನ ವ್ಯವಹರಣೆಗಳಲ್ಲಿ ಪೂರ್ಣಪ್ರಮಾಣದ ಲೇಖನ ಮಂಡಿಸಿರುವುದು (ವಿಚಾರ ಸಂಕಿರಣಗಳಲ್ಲಿ/ ಸಮ್ಮೇಳನಗಳಲ್ಲಿ ಲೇಖನ ಮಂಡಿಸಿರುವುದನ್ನು ಮತ್ತು ಸಮ್ಮೇಳನ ವ್ಯವಹರಣೆಗಳಲ್ಲಿ ಪೂರ್ಣ ಪ್ರಮಾಣದ ಲೇಖನ ಪ್ರಕಟವಾಗಿರುವುದನ್ನು ಒಂದು ಸಲಕ್ಕೆ ಮಾತ್ರ ಪರಿಗಣಿಸಲಾಗುವುದು | | |
| | ಅಂತರರಾಷ್ಟ್ರೀಯ (ವಿದೇಶ) | 07 | 07 |
| | ಅಂತರರಾಷ್ಟ್ರೀಯ (ರಾಷ್ಟ್ರದೊಳಗೆ) | 05 | 05 |
| | ರಾಷ್ಟ್ರೀಯ | 03 | 03 |
| | ರಾಜ್ಯ/ವಿಶ್ವವಿದ್ಯಾಲಯ | 02 | 02 |

*ಸಂಶೋಧನಾ ಲೇಖನಗಳಿಗೆ ಸಂಬಂಧಿಸಿದ ಸಂಶೋಧನಾ ಅಂಕಗಳನ್ನು ಈ ಮುಂದಿನಂತೆ ಲೆಕ್ಕ ಹಾಕಲಾಗುವುದು:*

ಪ್ರೌಢ ಸಂಶೋಧನಾ ಪತ್ರಿಕೆಗಳು (ಪೀರ್ ರಿವ್ಯೂಡ್) ಅಥವಾ ಯು.ಜಿ.ಸಿ ಪಟ್ಟಿ ಮಾಡಿರುವ ಪತ್ರಿಕೆಗಳು (ಪ್ರಭಾವಾಂಶಗಳನ್ನು (ಇಂಪ್ಯಾಕ್ಸ್ ಪ್ಯಾಕ್ಟರ್) ಥಾಮ್ಸನ್ ರಾಯ್ಟರ್ಸ್ ಪಟ್ಟಿ ಪ್ರಕಾರ ನಿರ್ಧರಿಸಲಾಗುವುದು)

i) ಪ್ರಭಾವಾಂಶವಿಲ್ಲದಿರುವ (ಇಂಪಾಕ್ಸ್ ಪ್ಯಾಕ್ಟರ್) ಪ್ರೌಢ ಸಂಶೋಧನಾ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಲೇಖನ – 05 ಅಂಕಗಳು

ii) 1 ಕ್ಕಿಂತ ಕಡಿಮೆ ಪ್ರಭಾವಾಂಶವಿರುವ (ಇಂಪ್ಯಾಕ್ಸ್ ಪ್ಯಾಕ್ಟರ್) ಅಂಕಗಳು ಪ್ರೌಢ ಸಂಶೋಧನಾ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಲೇಖನ – 10

iii) 1 ರಿಂದ 2ರ ನಡುವಿನ ಪ್ರಭಾವಾಂಶವಿರುವ (ಇಂಪ್ಯಾಕ್ಸ್ ಪ್ಯಾಕ್ಟರ್) ಪ್ರೌಢ ಸಂಶೋಧನಾ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಲೇಖನ – 15 ಅಂಕಗಳು

iV) 2 ರಿಂದ 5 ರ ನಡುವಿನ ಪ್ರಭಾವಾಂಶವಿರುವ (ಇಂಪ್ಯಾಕ್ಸ್ ಪ್ಯಾಕ್ಟರ್) ಪ್ರೌಢ ಸಂಶೋಧನಾ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಲೇಖನ – 20 ಅಂಕಗಳು

V) 5 ರಿಂದ 10 ರ ನಡುವಿನ ಪ್ರಭಾವಾಂಶವಿರುವ (ಇಂಪ್ಯಾಕ್ಸ್ ಪ್ಯಾಕ್ಟರ್) ಪ್ರೌಢ ಸಂಶೋಧನಾ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಲೇಖನ – 25 ಅಂಕಗಳು

Vi) 10 ಕ್ಕಿಂತ ಹೆಚ್ಚು ಪ್ರಭಾವಾಂಶವಿರುವ (ಇಂಪ್ಯಾಕ್ಸ್ ಪ್ಯಾಕ್ಟರ್) ಪ್ರೌಢ ಸಂಶೋಧನಾ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಲೇಖನ – 30 ಅಂಕಗಳು

(J) ಇಬ್ಬರು ಲೇಖಕರು: ಪ್ರತಿಯೊಬ್ಬ ಲೇಖಕರಿಗೂ ಪ್ರಕಟಣೆಯ ಒಟ್ಟು ಮೌಲ್ಯದ ಶೇಕಡಾ 70 ರಷ್ಟು

| | |
|---|---|
| qualification obtained in one subject to be equivalent to qualification obtained in another subject, such equivalent qualification and subjects shall be considered. | shall be considered." |

By order and in the name of the
Governor of Karnataka,

(J.T. Venkatarama)
Under Secretary to Government,
Higher Education Department
(Collegiate Education)

ಕರ್ನಾಟಕ ಸರ್ಕಾರ

ಸಂಖ್ಯೆ:ಇಡಿ 257 ಡಿಸಿಇ 2019 (ಭಾಗ-3)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು,ದಿನಾಂಕ: 19 -10-2020

## ತಿದ್ದುಪಡಿ

ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 257 ಡಿಸಿಇ 2019 (ಭಾಗ-3) ದಿನಾಂಕ:08-07-2020ರ ಸಹಾಯಕ ಪ್ರಾಧ್ಯಾಪಕರ ವಿಶೇಷ ನೇಮಕಾತಿ ನಿಯಮ ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಕಾಲೇಜು ಶಿಕ್ಷಣ ಇಲಾಖೆ) (ಸಹಾಯಕ ಪ್ರಾಧ್ಯಾಪಕರ ನೇಮಕಾತಿ) (ವಿಶೇಷ) ನಿಯಮಗಳು 2020ರ ನಿಯಮ 3ಎ(1)ನ್ನು ಈ ಕೆಳಕಂಡಂತೆ ಓದಿಕೊಳ್ಳತಕ್ಕದ್ದು.

| ಪ್ರಸ್ತುತ ಜಾರಿಯಲ್ಲಿರುವ 3ಎ(1) ನಿಯಮ | ಮಾರ್ಪಡಿಸಿದ 3ಎ(1) ನಿಯಮಗಳು |
|---|---|
| "**ಅಭ್ಯರ್ಥಿಯು ಯಾವ ವಿಷಯಕ್ಕೆ ಅರ್ಜಿಯನ್ನು ಸಲ್ಲಿಸಿರುವನೋ ಆ ವಿಷಯವನ್ನು ಪದವಿ ಹಂತದಲ್ಲಿ ಐಚ್ಛಿಕ ವಿಷಯವಾಗಿ ಅಧ್ಯಯನ ಮಾಡಿರತಕ್ಕದ್ದು.** ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 2ರ ಉಪನಿಯಮ (1)ರ (ಎಚ್) ಖಂಡದ ಅಡಿಯಲ್ಲಿ ಕಾಲಕಾಲಕ್ಕೆ ಸರ್ಕಾರಿ ಅಧಿಸೂಚನೆಗಳನ್ನು ಹೊರಡಿಸಿ ಒಂದು ವಿಷಯದಲ್ಲಿ ಪಡೆದ ವಿದ್ಯಾರ್ಹತೆಯನ್ನು ಮತ್ತೊಂದು ವಿಷಯದಲ್ಲಿ ಪಡೆದ ವಿದ್ಯಾರ್ಹತೆಗೆ ಸಮಾನವೆಂದು ಘೋಷಿಸಿದ ಸಂದರ್ಭದಲ್ಲಿ ಅಂತಹ ಸಮಾನ | "ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 2ರ ಉಪನಿಯಮ (1)ರ (ಎಚ್) ಖಂಡದ ಅಡಿಯಲ್ಲಿ ಕಾಲಕಾಲಕ್ಕೆ ಸರ್ಕಾರಿ ಅಧಿಸೂಚನೆಗಳನ್ನು ಹೊರಡಿಸಿ ಒಂದು ವಿಷಯದಲ್ಲಿ ಪಡೆದ ವಿದ್ಯಾರ್ಹತೆಯನ್ನು ಮತ್ತೊಂದು ವಿಷಯದಲ್ಲಿ ಪಡೆದ ವಿದ್ಯಾರ್ಹತೆಗೆ ಸಮಾನವೆಂದು ಘೋಷಿಸಿದ ಸಂದರ್ಭದಲ್ಲಿ ಅಂತಹ ಸಮಾನ ವಿದ್ಯಾರ್ಹತೆ ಮತ್ತು ವಿಷಯಗಳನ್ನು |

(ಬಿ) ಇಬ್ಬರಿಗಿಂತ ಹೆಚ್ಚು ಲೇಖಕರು: ಪ್ರಥಮ/ಪ್ರಧಾನ/ಪ್ರಮುಖ ಲೇಖಕರಿಗೆ ಪ್ರಕಟಣೆಯ ಒಟ್ಟು ಮೌಲ್ಯದ ಶೇಕಡಾ 70 ರಷ್ಟು ಮತ್ತು ಪ್ರತಿಯೊಬ್ಬ ಜಂಟಿ ಲೇಖಕರಿಗೆ ಪ್ರಕಟಣೆಯ ಒಟ್ಟು ಮೌಲ್ಯದ ಶೇಕಡಾ 30 ರಷ್ಟು.

ಜಂಟಿ ಯೋಜನೆಗಳು: ಪ್ರಧಾನ ಸಂಶೋಧಕರು ಮತ್ತು ಸಹ ಸಂಶೋಧಕರು ಪ್ರತಿಯೊಬ್ಬರಿಗೂ ಶೇಕಡಾ 50 ರಷ್ಟು.

ಸೂಚನೆ:

- ಸಂಪಾದಿತ ಪುಸ್ತಕದಲ್ಲಿ ಅಥವಾ ವ್ಯವಹರಣೆಯಲ್ಲಿ ಲೇಖನವನ್ನು ಒಂದು ಭಾಗವಾಗಿ ಪ್ರಕಟಿಸಿದ್ದರೆ, ಅದನ್ನು ಒಂದು ಸಲಕ್ಕೆ ಮಾತ್ರ ಕ್ಲೇಮ ಮಾಡಬಹುದು.
- ಸಂಶೋಧನಾ ವಿದ್ಯಾರ್ಥಿಗಳಿಗೆ ಜಂಟಿಯಾಗಿ ಮಾರ್ಗದರ್ಶನ ಮಾಡಿದ್ದರೆ, ಅದಕ್ಕೆ ಸಂಬಂಧಿಸಿದ ಸೂತ್ರವು, ಮಾರ್ಗದರ್ಶಕರು ಮತ್ತು ಸಹ ಮಾರ್ಗದರ್ಶಕರಿಗೆ ಒಟ್ಟು ಅಂಕದ ಶೇಕಡಾ 70 ರಷ್ಟು ಆಗಿರತಕ್ಕದ್ದು. ಮೇಲ್ವಿಚಾರಕರು ಮತ್ತು ಸಹ ಮೇಲ್ವಿಚಾರಕರಿಬ್ಬರೂ ತಲಾ 7 ಅಂಕಗಳ್ನು ಪಡೆಯುವರು.
- ಶಿಕ್ಷಕರ ಸಂಶೋಧನಾ ಅಂಕವನ್ನು ಲೆಕ್ಕಹಾಕುವ ಉದ್ದೇಶಕ್ಕಾಗಿ, 5 (ಬಿ). ನೀತಿ ದಸ್ತಾವೇಜು ಮತ್ತು 6. ಉಪನ್ಯಾಸ ನೀಡಲು ಆಹ್ವಾನಿಸಿರುವುದು/ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿರುವುದು/ಲೇಖನ ಮಂಡಿಸಿರುವುದು, ಪ್ರವರ್ಗಗಳಿಂದ ಒಗ್ಗೂಡಿಸಿ ಪರಿಗಣಿಸುವ ಸಂಶೋಧನಾ ಅಂಕವು, ಸಂಬಂಧಪಟ್ಟ ಶಿಕ್ಷಕರ ಒಟ್ಟು ಸಂಶೋಧನಾ ಅಂಕದ ಶೇಕಡಾ ಮುವ್ವತ್ತರಷ್ಟು ಗರಿಷ್ಠ ಪ್ರಮಾಣದಲ್ಲಿ ಇರತಕ್ಕದ್ದು.
- ಸಂಶೋಧನಾ ಅಂಕವನ್ನು, ಆರು ಪ್ರವರ್ಗಗಳ ಪೈಕಿ ಕನಿಷ್ಠ ಮೂರು ಪ್ರವರ್ಗಗಳಿಂದ ಗಳಿಸತಕ್ಕದ್ದು.

**PR-580**

## GOVERNMENT OF KARNATAKA

No. ED 257 DCE 2019 (Part-3)

Karnataka Government Secretariat,
M.S.Building,
Bangalore, dated: 19.10.2020.

# CORRIGENDUM

In this Government Notification No. ED 257 DCE 2019 (Part-3), Dated:08.07.2020, Karnataka Education Department Services (Collegiate Education Department) (Recruitment) (Special) Rules, 2020 Rule 3a(i) is read as follows;

| Existing Rule of 3a(i) | Revised Rule of 3a(i) |
|---|---|
| **a candidate must have studied the subject to which application is submitted as an optional subject in under graduate level.** In case of Government Notifications issued from time to time under clause (h) of sub rule (1) of rule 2 of the Karnataka Civil Services (General Recruitment) Rules, 1977 declaring | "In case of Government Notifications issued from time to time under clause (h) of sub rule (1) of rule 2 of the Karnataka Civil Services (General Recruitment) Rules, 1977 declaring qualification obtained in one subject to be equivalent to qualification obtained in another subject, such equivalent qualification and subjects |

ಸ್ವೀಕೃತಿ ಸಂಖ್ಯೆ 249 ದಿನಾಂಕ 08.04.2022
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಆಯುಕ್ತರ ಆಪ್ತ ಶಾಖೆ. 29 08 APR 2022

ಕರ್ನಾಟಕ ಸರ್ಕಾರ

ಸಂಖ್ಯೆ. ಇಡಿ 121 ಡಿಸಿಇ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 21.03.2022

## ಅಧಿಸೂಚನೆ

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ 14) ರ 8ನೇ ಪ್ರಕರಣವನ್ನು ಓದಿಕೊಂಡು, 3ನೇ ಪ್ರಕರಣದ (2)ನೇ ಉಪ-ಪ್ರಕರಣದ(ಎ) ಖಂಡದ ಮೂಲಕ ಅಗತ್ಯಪಡಿಸಲಾದಂತೆ, ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಕಾಲೇಜು ಶಿಕ್ಷಣ ಇಲಾಖೆ) (ಪ್ರಾಂಶುಪಾಲರು (ಯುಜಿ) ಹುದ್ದೆಗಳ ನೇಮಕಾತಿ) (ವಿಶೇಷ) (ತಿದ್ದುಪಡಿ) ನಿಯಮಗಳು, 2022 ರ ಕರಡನ್ನು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆ ಸಂಖ್ಯೆ. 88 ದಿನಾಂಕ: 24.02.2022 ರ ಭಾಗ IV-ಎ ರಲ್ಲಿ, ಅಧಿಸೂಚನೆ ಸಂಖ್ಯೆ : ಇಡಿ 121 ಡಿಸಿಇ 2018, ದಿನಾಂಕ: 24.02.2022ನ್ನು ಪ್ರಕಟಿಸಲಾಗಿದ್ದು, ಅಧಿಕೃತ ರಾಜ್ಯಪತ್ರದಲ್ಲಿ ಇದನ್ನು ಪ್ರಕಟಿಸಿದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಇದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿರುವುದರಿಂದ.

ಮತ್ತು ಸದರಿ ರಾಜ್ಯಪತ್ರವನ್ನು 24.02.2022 ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ.

ಮತ್ತು ಈ ಕರಡು ನಿಯಮಗಳಿಗೆ ಸಂಬಂಧಿಸಿದಂತೆ, ಸರ್ಕಾರದಲ್ಲಿ ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳು ಸ್ವೀಕರಿಸದೇ ಇರುವುದರಿಂದ.

ಪ್ರಸ್ತುತ, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ 14) ರ 8ನೇ ಪ್ರಕರಣವನ್ನು ಓದಿಕೊಂಡು, 3ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಮೂಲಕ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಎಂದರೆ.-

## ನಿಯಮಗಳು

**1. ಶೀರ್ಷಿಕೆ ಮತ್ತು ಪ್ರಾರಂಭ.-** (1) ಈ ನಿಯಮಗಳನ್ನು, ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಕಾಲೇಜು ಶಿಕ್ಷಣ ಇಲಾಖೆ) (ಪ್ರಾಂಶುಪಾಲರು (ಯುಜಿ) ಹುದ್ದೆಗಳ ನೇಮಕಾತಿ) (ವಿಶೇಷ) (ತಿದ್ದುಪಡಿ) ನಿಯಮಗಳು, 2022 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು, ಅಧಿಕೃತ ರಾಜ್ಯಪತ್ರದಲ್ಲಿ ಅವುಗಳನ್ನು ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. 3ನೇ ನಿಯಮದ ತಿದ್ದುಪಡಿ.-** ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಕಾಲೇಜು ಶಿಕ್ಷಣ ಇಲಾಖೆ) (ಪ್ರಾಂಶುಪಾಲರು (ಯುಜಿ) ಹುದ್ದೆಗಳ ನೇಮಕಾತಿ) (ವಿಶೇಷ) ನಿಯಮಗಳು, 2020 ರಲ್ಲಿನ 3ನೇ ನಿಯಮದ (1)ನೇ ಉಪ- ನಿಯಮದಲ್ಲಿನ (ಎಫ್) ಖಂಡವನ್ನು ಕೈ ಬಿಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್. ಹರ್ಷ)
ಸರ್ಕಾರದ ಅಧೀನ ಕಾರ್ಯದರ್ಶಿ
ಉನ್ನತ ಶಿಕ್ಷಣ ಇಲಾಖೆ (ಕಾಲೇಜು ಶಿಕ್ಷಣ)

**ಇವರಿಗೆ,**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು (ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಿ 50 ಪ್ರತಿಯನ್ನು ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ ಇವರಿಗೆ ಕಳುಹಿಸಲು ಕೋರಿದೆ.)

**ಪ್ರತಿಗಳು,**

1. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
2. ನಿರ್ದೇಶಕರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
3. ಸರ್ಕಾರದ ಉಪಕಾರ್ಯದರ್ಶಿ, ಸಚಿವ ಸಂಪುಟ (ಸಂಖ್ಯೆ-ಸಿ-646/2019) ವಿಧಾನಸೌಧ, ಬೆಂಗಳೂರು
4. ಸರ್ಕಾರದ ಉಪಕಾರ್ಯದರ್ಶಿ, ಆರ್ಥಿಕ ಇಲಾಖೆ (ಸೇವೆಗಳು-1), ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಉಪಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಉಪಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು-1 ಮತ್ತು 2), ವಿಧಾನಸೌಧ, ಬೆಂಗಳೂರು.
7. ಸರ್ಕಾರದ ಉಪಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
8. ಮಾನ್ಯ ಉಪಮುಖ್ಯಮಂತ್ರಿಗಳು ಮತ್ತು ಉನ್ನತ ಶಿಕ್ಷಣ ಸಚಿವರ ಆಪ್ತಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
10. ಎಲ್ಲಾ ಜಂಟಿ ನಿರ್ದೇಶಕರುಗಳು, ಕಾಲೇಜು ಶಿಕ್ಷಣ ಇಲಾಖೆ.
11. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತಕಾರ್ಯದರ್ಶಿ ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
12. ಸರ್ಕಾರದ ಉಪಕಾರ್ಯದರ್ಶಿಯವರ ಆಪ್ತ ಸಹಾಯಕರು (ಕಾಲೇಜು ಮತ್ತು ತಾಂತ್ರಿಕ,) ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
13. ಕಛೇರಿ ಪ್ರತಿ/ ಶಾಖಾರಕ್ಷಾ ಕಡತ/ ಹೆಚ್ಚುವರಿ ಪ್ರತಿ.